**ಸಾಕ್ಷಿಯನ್ನು ದಿನಾಂಕ: 27-06-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು :- 3 ನೇ ವಾದಿಯಿಂದ**

ಸಾಮಾನ್ಯವಾಗಿ ಒಂದು ಸರ್ವೆ ನಂಬರ್ ನಲ್ಲಿ ಇರುವ ಕರಾಬು ಸದರಿ ಸರ್ವೆ ನಂಬರ್ ಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಆ ರೀತಿಯ ಕರಾಬು ಜಾಗ ಸದರಿ ಸರ್ವೆ ನಂಬರ್ ನ ಮಾಲೀಕರ ಹೊರತಾಗಿ ಬೇರೆಯವರಿಗೆ ಸೇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಕಾರ ಸರ್ವೆ ನಂ.78 ರಲ್ಲಿ ಇರುವ ಕರಾಬಿನ ಪೈಕಿ 02 ಗುಂಟೆ ರಸ್ತೆಗೆ ಹೋಗಿ ಉಳಿದ 05 ಗುಂಟೆ ಕರಾಬಿನಲ್ಲಿ ನಾನು ಸ್ವಾಧೀನ ಹೊಂದಿರುತ್ತೇನೆ. ನಾನು ಹೇಳುವ ಕರಾಬಿನಲ್ಲಿ ಮಾಡಿರುವ ರಸ್ತೆ ಲೇಔಟ್ ಗೆ ಹೋಗಿರುತ್ತದೆ. ನನ್ನ ಪ್ರಕಾರ 4 ನೇ ಪ್ರತಿವಾದಿ ಸರ್ಕಾರಿ ಓಣಿ ಜಾಗದಲ್ಲಿ ಇರುತ್ತಾರೆ. ವಾದಿಗಳ ತಂದೆ ಕೆ.ವಿ. ನಾಗರಾಜು ರವರು ಹೆಸರಿಗೆ ಆದ ದಿನಾಂಕಃ 12-09-2018 ರ ಕ್ರಯಪತ್ರವನ್ನು ನಾನು ನೋಡಿರುವುದಿಲ್ಲ. ಈ ದಾವೆ ದಾಖಲಿಸಿದ ನಂತರ ಅವರು ಹಾಜರು ಪಡಿಸಿದ ಕ್ರಯಪತ್ರದ ಬಗ್ಗೆ ನಮ್ಮ ವಕೀಲರ ಮುಖಾಂತರ ಕೇಳಿ ತಿಳಿದುಕೊಂಡಿರುತ್ತೇನೆ. ನಾನು ಸದರಿ ಕ್ರಯಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂದಿಯ ಬಗ್ಗೆ ತಿಳಿದುಕೊಂಡಿರುತ್ತೇನೆ. ಆದರೆ ಸದರಿ ಚೆಕ್ಕುಬಂದಿ ಸುಳ್ಳು ಎಂದು ನುಡಿಯುತ್ತೇನೆ. ಸದರಿ ಕ್ರಯಪತ್ರದ ಪ್ರಕಾರ ಪೂರ್ತಿ 08 ವರೆ ಗುಂಟೆ ಜಮೀನಿನ ಪೂರ್ವಕ್ಕೆಃ ಸರ್ಕಾರಿ ಓಣಿ, ಪಶ್ಚಿಮಕ್ಕೆಃ ಸರ್ವೆ ನಂ.78 ರ ಉಳಿಕೆ ಭಾಗ, ಉತ್ತರಕ್ಕೆಃ ರಸ್ತೆ ಮತ್ತು ದಕ್ಷಿಣಕ್ಕೆಃ ಸರ್ವೆ ನಂ.78 ರ ಪೈಕಿ ಕೆರೆ ಇದೆ ಎಂದು ತೋರಿಸಿರುತ್ತಾರೆ. ನಾನು ಹೇಳುವ 05 ಗುಂಟೆ ಜಮೀನಿನ ಕಾನೂನು ಬದ್ಧ ಮಾಲೀಕ ಎಂದು ತೋರಿಸಲು ದಾಖಲೆಗಳನ್ನು ಹಾಜರು ಮಾಡಿರುತ್ತೇನೆ. ಆ ಬಗ್ಗೆ ಮಂಜೂರಾತಿ ಆದೇಶ ಅಥವಾ ಕ್ರಯಪತ್ರ ಹಾಜರು ಮಾಡಿರುವುದಿಲ್ಲ. ನಾನು ಸರ್ವೆ ನಂ.78 ರಲ್ಲಿ ಚಕ್ರಪಾಣಿ ಅಥವಾ ಶೇಷಾಚಾರ್ ಅಥವಾ ಮುರುಳಿ ಕೃಷ್ಣ ರೆಡ್ಡಿ ಅಥವಾ ಶ್ರೀಲತಾ ರವರಿಂದ ಯಾವುದೇ ಜಮೀನು ಖರೀದಿ ಮಾಡಿರುವುದಿಲ್ಲ. ನಮ್ಮ ದೊಡ್ಡಪ್ಪ ದಾಸಪ್ಪ ರವರು ಸದರಿ 05 ಗುಂಟೆ ಜಮೀನನ್ನು ಮಂಜಾರು ಮಾಡುವಂತೆ ತಹಶೀಲ್ದಾರರವರ ಮುಂದೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಯನ್ನು ಮಠದ ವಿರುದ್ಧ ದಾಖಲಿಸಲಾಗಿತ್ತು. ಚಕ್ರಪಾಣಿ ಅಥವಾ ಶೇಷಾಚಾರ್ ರವರ ಹೆಸರಿನಲ್ಲಿ ಪಹಣಿ ಪತ್ರಿಕೆ ಆಗಿಲ್ಲ ಆದ್ದರಿಂದ ಅವರ ವಿರುದ್ಧ ದಾಖಲಿಸಿರಲಿಲ್ಲ. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ನೀಡಲು ಯಾವುದೇ ಅಭ್ಯಂತರ ಇಲ್ಲ. ದಾಸಪ್ಪರವರು ನೀಡಿದ ಅರ್ಜಿಯ ಮೇರೆಗೆ ಈಗ ಮಾನ್ಯ ಜಿಲ್ಲಾಧಿಕಾರಿಗಳ ಎದುರು ಮೇಲ್ಮನವಿ ಚಾಲ್ತಿಯಲ್ಲಿದೆ. ಸದರಿ ಮೇಲ್ಮನವಿ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ, ಆದರೆ ಹಾಜರು ಮಾಡುತ್ತೇನೆ. ಸಂಪೂರ್ಣ ಜಮೀನು

This is a True Copy of the Court Records Online. Authenticated @ districts.ecourtsindia.com/cnr/KABR310010432020/truecopy/order-11.pdf

ಚಕ್ರಪಾಣಿ ಅಥವಾ ಶೇಷಾಚಾರ್ ರವರಿಗೆ ಮಂಜೂರು ಆಗಿ ಅವರ ಹೆಸರಿನಲ್ಲಿ ಪಹಣಿ ಪತ್ರಿಕೆ ಇರುವುದರಿಂದ ದಾಸಪ್ಪರವರು ಸಲ್ಲಿಸಿದ ಅರ್ಜಿ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಆ ಕಾರಣದಿಂದ ನಾನು ಸದರಿ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ದಾಸಪ್ಪರವರಿಗೆ ಮಕ್ಕಳು ಇರುತ್ತಾರೆ, ಆದರೆ ನಾನು ಸಾಕು ಮಗ ಎನ್ನುವುದು ಸತ್ಯ. ದಾಸಪ್ಪರವರಿಗೆ ಮಕ್ಕಳು ಇಲ್ಲ ಹಾಗೂ ನಾನು ಅವರ ಸಾಕು ಮಗ ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ.

ದಾಸಪ್ಪ ನಾನು ಮತ್ತು ನನ್ನ ಪತ್ನಿ ಸೇರಿ ಶ್ವೇತಾ ಎನ್ನುವ ಮಹಿಳೆಗೆ ಬೇರೆ ಸ್ವತ್ತಿಗೆ ಸಂಬಂಧಿಸಿದಂತೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದೇವೆ ಎಂದರೆ ಸರಿ. ನಾನು ಸದರಿ ದಾಖಲೆಯ ಪ್ರತಿಯನ್ನು ನೋಡಿ ಒಪ್ಪಿಕೊಂಡ ಮೇರೆಗೆ ಅದನ್ನು **<u>ನಿಪಿ-18 ಎಂದು ಅಭಿಮುಖವಾಗಿ ಗುರುತಿಸಲಾಯಿತು</u>**. 1 ರಿಂದ 3ನೇ ಪ್ರತಿವಾದಿಗಳು ನಮ್ಮ ಕುಟುಂಬದ ಸ್ವತ್ತುಗಳ ವಿಭಾಗಕ್ಕಾಗಿ ಅಸಲು ದಾವಾ ನಂ.710/2007 ನ್ನು ಇದೇ ನ್ಯಾಯಾಲಯದಲ್ಲಿ ದಾಖಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಮ್ಮ ಕುಟುಂಬದ ಎಲ್ಲಾ ಸ್ವತ್ತುಗಳನ್ನು ಸೇರಿಸಿದ್ದೆವು ಎಂದರೆ ಸರಿ. ದಾವಾ ಸ್ವತ್ತನ್ನು ಸದರಿ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ವಾದಿಗಳೂ ಸಹ ಪಕ್ಷಕಾರರಾಗಿದ್ದರು ಎಂದು ಸ್ವತಃ ನುಡಿಯುತ್ತೇನೆ. ದಾವಾ ಸ್ವತ್ತಿನ ಮಾಲೀಕತ್ವ ಮತ್ತು ಸ್ವಾಧೀನವನ್ನು ನಾವು ಹೊಂದಿರಲಿಲ್ಲ ಆದ್ದರಿಂದ ಅಸಲು ದಾವಾ ನಂ.710/2007 ರಲ್ಲಿ ಸದರಿ ಸ್ವತ್ತನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ.

ದಾಸಪ್ಪರವರು ಅವರ ಸ್ವತ್ತುಗಳಿಗೆ ಸಂಬಂಧಿಸಿದಂತೆ ನಮ್ಮ ತಂದೆ ಮತ್ತು ತಾಯಿಗೆ ದಿನಾಂಕಃ 14-08-2008 ರಂದು ಒಂದು ವಿಲ್ ನಾಮೆ ಮಾಡಿದ್ದರು ಎಂದರೆ ಸರಿ. ಸದರಿ ವಿಲ್ ನಾಮೆ ಪ್ರಕಾರ ಅವರು ಅವರ ಎಲ್ಲಾ ಸ್ವತ್ತುಗಳನ್ನು ನಮ್ಮ ತಂದೆ ಮತ್ತು ತಾಯಿಗೆ ಅವರ ಜೀವಿತಾವಧಿಗೆ ಹಾಗೂ ತದನಂತರ 1 ರಿಂದ 3ನೇ ಪ್ರತಿವಾದಿಗಳಿಗೆ ಸೇರಬೇಕು ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಸದರಿ ವಿಲ್ ನಾಮೆಯಲ್ಲಿ ದಾವಾ ಸ್ವತ್ತಿನ ಬಗ್ಗೆ ಹೇಳಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಸ್ವಾಧೀನವನ್ನು ದಾಸಪ್ಪ ಅವರಾಗಲೀ ಅಥವಾ ನಾವಾಗಲೀ ಹೊಂದಿರಲಿಲ್ಲ ಆದ್ದರಿಂದ, ವಿಲ್ ನಾಮೆಯಲ್ಲಿ ದಾವಾ ಸ್ವತ್ತನ್ನು ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 15-07-2017 ರಂದು ನಮ್ಮ ಕುಟುಂಬದಲ್ಲಿ ಒಂದು ವಿಭಾಗ ಪತ್ರವನ್ನು ಮಾಡಿಕೊಂಡಿದ್ದು, ಸದರಿ ವಿಭಾಗ ಪತ್ರದ ಗಣಕೀಕೃತ ಪ್ರತಿಯನ್ನು ನೋಡಿ ಒಪ್ಪಿಕೊಂಡ ಮೇರೆಗೆ

This is a True Copy of the Court Records Online. Authenticated @ districts.ecourtsindia.com/cnr/KABR310010432020/truecopy/order-11.pdf

ಅದನ್ನು ಅಭಿಮುಖವಾಗಿ **ನಿಪಿ-19 ಎಂದು ಗುರುತಿಸಲಾಯಿತು**. ಸದರಿ ವಿಭಾಗ ಪತ್ರದಲ್ಲೂ ಸಹ ದಾವಾ ಸ್ವತ್ತನ್ನು ಸೇರಿಸಿಲ್ಲ ಎಂದರೆ ಸರಿ. 2019 ರಲ್ಲಿ ವಿಲ್ ನಾಮೆಯಾಗಿರುವುದರಿಂದ ಸೇರಿಸಿಲ್ಲ ಎಂದು ನುಡಿಯುತ್ತೇನೆ. ದಾವಾ ಸ್ವತ್ತು ನಮ್ಮ ಸ್ವತ್ತು ಅಲ್ಲದೇ ಇರುವುದರಿಂದ ಅದನ್ನು ವಿಭಾಗ ಪತ್ರದಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದಲ್ಲಿ ವಿಭಾಗ ಮಾಡಿಕೊಂಡ ಆಸ್ತಿ ಖಾತಾ ನಂ.3/3/173 ಆಗಿರುತ್ತದೆ ಎಂದರೆ ಸರಿ. ದಾಸಪ್ಪರವರಿಗೆ ಒಂದು ಕಲ್ಲಿನ ಮನೆ ಮತ್ತು ಎದುರು ಖಾಲಿ ಜಾಗ ಇತ್ತು ಎಂದರೆ ಸರಿ. ದಾಸಪ್ಪ ಮತ್ತು ನಮ್ಮ ತಂದೆಯ ಹೆಸರಿನಲ್ಲಿ ಅಕ್ಕಪಕ್ಕದಲ್ಲಿ ಕಲ್ಲಿನ ಮನೆ ಮತ್ತು ಹಂಚಿನ ಮನೆಗಳು ಇದ್ದವು ಎಂದರೆ ಸರಿ. ಸದರಿ ಎರಡು ಸ್ವತ್ತುಗಳ Property Extract ಗಳನ್ನು ನೋಡಿ ಒಪ್ಪಿಕೊಂಡ ಮೇರೆಗೆ ಅವುಗಳನ್ನು ಅಭಿಮುಖವಾಗಿ **ನಿಪಿ-20 ಮತ್ತು ನಿಪಿ-21 ಎಂದು ಗುರುತಿಸಲಾಯಿತು**. ಖಾತಾ ನಂ.3/3/173 ನಿಡಿ-17 ರಂತೆ ಪ್ರತಿವಾದಿಗಳಿಗೆ 173/1, 173/2 ಮತ್ತು 173/3 ಎಂದು ಪ್ರತ್ಯೇಕ ಆಗಿರುತ್ತದೆ ಎಂದರೆ ಸರಿ. 01-03-2021 ರಂದು ನನ್ನ ಭಾಗಕ್ಕೆ ಬಂದ 173/2 ರ ಆಸ್ತಿಯನ್ನು Federal Bank ನಲ್ಲಿ ಅಡಮಾನ ಮಾಡಿರುತ್ತೇನೆ ಎಂದರೆ ಸರಿ. ಸದರಿ ದಾಖಲೆಯ ಪ್ರತಿಯನ್ನು ನೋಡಿ ಒಪ್ಪಿ ಕೊಂಡಿರುವುದರಿಂದ ಅದನ್ನು ಅಭಿಮುಖವಾಗಿ **ನಿಪಿ-22 ಎಂದು ಗುರುತಿಸಲಾಯಿತು**. ಸದರಿ ಆಸ್ತಿಯ ಖಾತೆಗಳನ್ನು ದಾವಾ ಸ್ವತ್ತಿನ ಖಾತೆಗಳು ಎಂದು ಹಾಜರು ಪಡಿಸಿ ನ್ಯಾಯಾಲಯದ ದಿಕ್ಕು ತಪ್ಪಿಸಲು ಪ್ರಯತ್ನಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವ ದಾಖಲೆಗಳು ನಾವು ಸ್ವಾಧೀನದಲ್ಲಿರುವ 05 ಗುಂಟೆ ಜಾಗದ ದಾಖಲೆಗಳು. ನಿಡಿ-5 ರ ಖಾತೆ ನನ್ನ ಹೆಸರಿನಲ್ಲಿದ್ದು, ಸದರಿ ಸ್ವತ್ತಿನ ನಂ.3/173/2 ಆಗಿರುತ್ತದೆ ಎಂದರೆ ಸರಿ. ನಿಡಿ-5 ರ ಸ್ವತ್ತು ಮತ್ತು ವಿಭಾಗ ಪತ್ರದ ಪ್ರಕಾರ ನನಗೆ ಬಂದ ಸ್ವತ್ತು ಎರಡೂ ಒಂದೇ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ 2020 ರಲ್ಲಿ ನಾವು ಮನೆ ನಿರ್ಮಿಸಿರುತ್ತೇವೆ. ನಿಡಿ-4 ರ ಪರವಾನಿಗೆಯನ್ನು 2016 ರಲ್ಲಿ ಪಡೆದುಕೊಳ್ಳಲಾಗಿದೆ ಎಂದರೆ ಸರಿ. 2016 ರಲ್ಲಿ ಆಶ್ರಯ ಯೋಜನೆ ಅಡಿ ನನಗೆ ಮನೆ ಮಂಜೂರಾಗಿತ್ತು ಎಂದು ಸ್ವತಃ ನುಡಿಯುತ್ತೇನೆ. ಆಗ ನನ್ನ ಬಳಿ ಹಣ ಇಲ್ಲದ ಕಾರಣ ಆಗ ಮನೆ ನಿರ್ಮಿಸಲು ಸಾಧ್ಯವಾಗಲಿಲ್ಲ ಎಂದು ನುಡಿಯುತ್ತೇನೆ. ನಿಡಿ-4 ರ ಪ್ರಕಾರ 2016-17 ರಲ್ಲಿ ಮಾತ್ರ ಸದರಿ ಪರವಾನಿಗೆ ಮಾನ್ಯತೆ ಇತ್ತು ಎಂದರೆ ಸರಿ. 2020 ರಲ್ಲಿ ಸದರಿ ಪರವಾನಿಗೆಯನ್ನು ಪುನರುಜ್ಜೀವನ ಮಾಡಿಕೊಂಡಿರುತ್ತೇನೆ ಎಂದು ನುಡಿಯುತ್ತೇನೆ. ಆ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿರುತ್ತೇನೆ. ನನ್ನ ಪ್ರಕಾರ ಸದರಿ ಪರವಾನಿಗೆಯನ್ನು 05 ಗುಂಟೆ ಜಮೀನಿನಲ್ಲಿ ಮನೆ ನಿರ್ಮಿಸಲು ಪಡೆದಿರುತ್ತೇನೆ. ನನ್ನ ಪ್ರಕಾರ ನಾನು ಸ್ವಾಧೀನದಲ್ಲಿ ಇದ್ದೇನೆ ಎಂದು ಹೇಳುವ 05

This is a True Copy of the Court Records Online. Authenticated @ districts.ecourtsindia.com/cnr/KABR310010432020/truecopy/order-11.pdf

ಗುಂಟೆಯ ಜಮೀನಿನ ಪೂರ್ವಕ್ಕೆಃ 4 ನೇ ಪ್ರತಿವಾದಿಯು ಸ್ವಾಧೀನ ಹೊಂದಿರುವ ಓಣಿಯ ಜಾಗ, ಪಶ್ಚಿಮಕ್ಕೆಃ ನಾಗವಾರದ ಕಣ ಹಾಗೂ ದಾರಿ, ಉತ್ತರಕ್ಕೆಃ ರಸ್ತೆ ಮತ್ತು ದಕ್ಷಿಣಕ್ಕೆಃ ಶೇಷಾಚಾರ್ ಮತ್ತು ಚಕ್ರಪಾಣಿಯವರ ಜಮೀನು ಇರುತ್ತದೆ. ನಿಡಿ-4 ರ ಚೆಕ್ಕುಬಂದಿಗೂ ಮತ್ತು ನಾನು ಹೇಳುವ ಚೆಕ್ಕುಬಂದಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಮ್ಮ ಒಟ್ಟು ಕುಟುಂಬದ ವಿಭಾಗದಲ್ಲಿ ಬಂದ ಸ್ವತ್ತಿನಲ್ಲಿ ಮನೆ ನಿರ್ಮಿಸಲು ಪಡೆದುಕೊಂಡ ಪರವಾನಿಗೆಯನ್ನು ದಾವಾ ಸ್ವತ್ತಿನಲ್ಲಿ ಮನೆ ನಿರ್ಮಿಸಲು ಪಡೆದುಕೊಂಡ ಪರವಾನಿಗೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-4 ಮತ್ತು 5 ವಿಭಾಗದ ಪ್ರಕಾರ ನನ್ನ ಭಾಗಕ್ಕೆ ಬಂದ ಜಮೀನಿನ ದಾಖಲೆಗಳು ಎಂದರೆ ಸರಿಯಲ್ಲ. ಆಶ್ರಯ ಯೋಜನೆ ಅಡಿ ನನ್ನ ಹೆಸರಿನಲ್ಲಿ ಮನೆ ಮಂಜೂರಾಗಿತ್ತು. ನಿಡಿ-7 ರ ಪ್ರಕಾರ ನನ್ನ ಹೆಸರಿನಲ್ಲಿ ಮನೆ ಮಂಜೂರಾಗಿರಲಿಲ್ಲ, ನನ್ನ ಪತ್ನಿ ವರಲಕ್ಷ್ಮೀಯವರ ಹೆಸರಿಗೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಆಶ್ರಯ ಯೋಜನೆ ಅಡಿ ನನ್ನ ಹೆಸರಿನಲ್ಲಿ ಮನೆ ಮಂಜೂರಾದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಮಂಜೂರು ಆಗಿರಲಿಲ್ಲ, ಆದ್ದರಿಂದ ದಾಖಲೆಯನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಿಡಿ-8 ರಿಂದ 14 ನಮ್ಮ ಸ್ವಂತ ಆಸ್ತಿಗೆ ಸಂಬಂಧಿಸಿದಂತೆ ನಿಪಿ-19 ರ ಪ್ರಕಾರ ನಮಗೆ ಬಂದ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳು ಎಂದರೆ ಸರಿಯಲ್ಲ. ನಿಡಿ-6, 15 ಮತ್ತು 16 ವಿದ್ಯುತ್ ಸಂಪರ್ಕಗಳನ್ನು ನಮ್ಮ ಕುಟುಂಬದ ಆಸ್ತಿಗೆ ಪಡೆದುಕೊಂಡಿದ್ದು, ಅದನ್ನು ದಾವಾ ಸ್ವತ್ತಿನಲ್ಲಿ ಅಕ್ರಮವಾಗಿ ನಿರ್ಮಿಸಿದ ಮನೆಗೆ ತಂದು ಅಳವಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳಲ್ಲಿ ವಿದ್ಯುತ್ ಸಂಪರ್ಕವನ್ನು ನಾನು ಹೇಳುವ ಖಾತೆ ನಂಬರ್ ಗೆ ನೀಡಲಾಗಿದೆ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿಡಿ-19 ರಿಂದ 24, ನಿಪಿ-19 ರ ವಿಭಾಗದಲ್ಲಿ ನನಗೆ ಮತ್ತು 1 ರಿಂದ 3 ನೇ ಪ್ರತಿವಾದಿಗಳಿಗೆ ಬಂದ ನಮ್ಮ ಕುಟುಂಬದ ಆಸ್ತಿಗೆ ಸಂಬಂಧಿಸಿದ ದಾಖಲೆಗಳು ಎಂದರೆ ಸರಿಯಲ್ಲ. ನಿಡಿ-29 ರಿಂದ 31 ಈ ದಾವೆಗೋಸ್ಕರ ಸೃಷ್ಟಿಸಿಕೊಂಡ ದಾಖಲೆಗಳು ಎಂದರೆ ಸರಿಯಲ್ಲ. ಸದರಿ ದಾಖಲೆಗಳಲ್ಲಿ ಕೇವಲ ತೆರಿಗೆ ಸಂಗ್ರಹಿಸಲು ಸದರಿ ದಾಖಲೆಗಳನ್ನು ನೀಡಲಾಗಿದೆ ಹಾಗೂ ಯಾವುದೇ ಹಕ್ಕನ್ನು ಊರ್ಜಿತಗೊಳಿಸಲು ಅಲ್ಲ ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ನಿಡಿ-32 ರಿಂದ 37 ವಿಭಾಗ ಪತ್ರದಲ್ಲಿ ಬಂದ ನಮ್ಮ ಕುಟುಂಬದ ಆಸ್ತಿಗೆ ಸಂಬಂಧಿಸಿದ ದಾಖಲೆಗಳು ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABR310010432020/truecopy/order-11.pdf

(ವಾದಿಯ ಕೋರಿಕೆಯ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು).

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**

This is a True Copy of the Court Records Online. Authenticated @ districts.ecourtsindia.com/cnr/KABR310010432020/truecopy/order-11.pdf

www.ecourtsindia.com